ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 13 ನೇ ಮಾರ್ಚ್, 2020

ರಾಷ್ಟ್ರಕವಿ ಆಯ್ಕೆಗಿರುವ ಮಾನದಂಡಗಳ ಬಗ್ಗೆ

ಶ್ರೀ ಎಂ. ಸಿ. ವೇಣುಗೋಪಾಲ್(ವಿಧಾನಸಭೆಯಿಂದ ಚುನಾಯಿತರಾದವರು):-

898 (1100) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಷ್ಟ್ರಕವಿ ಆಯ್ಕೆ ಮಾಡಲು ಇರುವ ಮಾನದಂಡಗಳೇನು ;

(ಆ) ರಾಷ್ಟ್ರಕವಿಯಾಗಿ ಈವರೆವಿಗೂ ಯಾರು ಯಾರನ್ನು ಯಾವ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ ;

(ಇ) ಡಾ|| ಶಿವರುದ್ರಪ್ಪನವರ ನಂತರ ಬೇರೆ ಕವಿಗಳನ್ನು ರಾಷ್ಟ್ರ ಕವಿಗಳೆಂದು ಘೋಷಣೆ ಮಾಡಿಲ್ಲದಿರುವುದಕ್ಕೆ ಕಾರಣವೇನು;

(ಈ) ಕರ್ನಾಟಕ ರತ್ನ ಬಿರುದನ್ನು ಈವರೆಗೂ ಯಾರು-ಯಾರಿಗೆ ನೀಡಲಾಗಿದೆ ;

(ಉ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಿಬ್ಬಂದಿ ಮಂಜೂರಾತಿ ಕೊರತೆ ಇರುವ ಬಗ್ಗೆ ಮಾಹಿತಿ ನೀಡುವುದು ;

(ಊ) ಜಯಂತಿಗಳು ಮತ್ತು ಉತ್ಸವಗಳು ಪರಿಣಾಮಕಾರಿಯಾಗಿ ನಡೆಸದಿರುವುದಕ್ಕೆ ಕಾರಣವೇನು ;

(ಋ) ಸಾಂಸ್ಕೃತಿಕ ಮತ್ತು ಸಾಹಿತ್ಯ ಸಂಘ ಸಂಸ್ಥೆಗಳಿಗೆ ಅನುದಾನ ನೀಡುತ್ತಿರುವ ವಿವರ ಮತ್ತು ಈ ಬಗ್ಗೆ ತಾರತಮ್ಯ ನೀತಿ ಅನುಸರಿಸುತ್ತಿರುವುದಕ್ಕೆ ಕಾರಣವೇನು ;

(ಎ) ಬಜೆಟ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡಲಾಗಿರುವ ಅನುದಾನವನ್ನು ಹಂಚಿಕೆ ಮಾಡಿರುವ ಬಗ್ಗೆ ವಿವರ ನೀಡುವುದು ?